# ವರ್ಗ ಸಂಘರ್ಷದ ನೆಲೆಯಲ್ಲಿ ಚಂದ್ರಶೇಖರ ಕಂಬಾರರ ನಾಯೀಕತೆ

**ಶರಣಪ್ಪ ಆಡಕಾರ**

ಅತಿಥಿ ಉಪನ್ಯಾಸಕರು, ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ.

**Received: 19/01/2025 ; Accepted: 15/02/2025 ; Published: 03/03/2025**

**DOI: https://doi.org/10.5281/zenodo.14961420**

## ABSTRACT:

ಚಂದ್ರಶೇಖರ ಕಂಬಾರ ಅವರ ನಾಟಕಗಳು ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಜಮೀನ್ದಾರಿ ವ್ಯವಸ್ಥೆಯಲ್ಲಿನ ಕ್ರೌರ್ಯ, ಪೊಳ್ಳುವ್ಯಕ್ತಿತ್ವ, ಗೌಡನ ನಿರ್ವಿರ್ಯತನವನ್ನು ಹೆಚ್ಚು ಅನಾವರಣಗೊಳಿಸುತ್ತವೆ. ಶ್ರೀಮಂತಿಕೆಯ ಸೊಕ್ಕಿನಲ್ಲಿರುವ ಗೌಡ ಊರಿನಲ್ಲಿನ ಹೆಣ್ಣುಮಕ್ಕಳನ್ನು ಅನುಭವಿಸುವೆ ಎಂಬ ಭ್ರಮಾ ಲೋಕದಲ್ಲಿ ಬದುಕು ಸಾಗಿಸುವಂತವನು. ಅಂತಹ ಗೌಡ ಶಾರಿಯಂತಹ ಹೆಣ್ಣನ್ನು ಭೋಗಿಸಬೇಕೆಂದು ಮನೆಗೆ ಕರೆ ತಂದು ಅವಳು ಆ ಮನೆಯ ಆಳು ಮಗನೊಟ್ಟಿಗೆ ಓಡಿ ಹೋಗುವ ವಿಷಯವನ್ನು ಕಂಬಾರರ ನಾಯಿಕತೆ ಚಿತ್ರಿಸುತ್ತದೆ. ಇಲ್ಲಿ ಸೋಮಣ್ಣನು ಕಾಲಿನಿಂದ ತೋರಿಸಿದ ಕೆಲಸವನ್ನು ತಲೆ ಮೇಲೆ ಹೊತ್ತು ಮಾಡುತ್ತಿದ್ದ ನಾಯಿಮಗ, ಶಾರಿಯ ಮಾತಿಗಳಿಂದ ಪ್ರೇರಣೆ ಪಡೆದು ಅವಳನ್ನು ಕಾಪಾಡುವ ನೆಪದಲ್ಲಿ ಸೋಮಣ್ಣನಿಂದ ಸ್ವಾತಂತ್ರ್ಯ ಪಡೆದುಕೊಳ್ಳುತ್ತಾನೆ. ಶಾರಿ ಇಲ್ಲಿ ಒಂದು ಸಮುದಾಯದ ಉದ್ಧಾರಕ್ಕಾಗಿ ಬಂದ ಶಕ್ತಿಯಾಗಿ ವ್ಯಕ್ತವಾಗುತ್ತಾಳೆ. ಬಡವರ ಮುಗ್ಧತೆಯನ್ನು ದುರಪಯೋಗ ಮಾಡಿಕೊಳ್ಳುವ ಆಳುವ ವರ್ಗದ ಗುಣವನ್ನು ವಿರೋಧಿಸುವ ನೆಲೆಯಲ್ಲಿ ಶಾರಿ ಪಾತ್ರ ಸೃಷ್ಟಿಯಾಗಿದೆ. ಈ ಲೇಖನ ಸಮಾಜವು ವರ್ಗದ ಹಿನ್ನಲೆಯಲ್ಲಿ ತಳಸಮುದಾಯವನ್ನು ಹೇಗೆಲ್ಲಾ ಬಳಸಿಕೊಳ್ಳುತ್ತದೆ ಎನ್ನುವುದನ್ನು ಬಿಚ್ಚಿಡುವ ಉದ್ದೇಶವನ್ನು ಹೊಂದಿದೆ.

## KEYWORDS:

ವರ್ಗ ಸಂಘರ್ಷ, ಪೊಳ್ಳುವ್ಯಕ್ತಿತ್ವ, ಶೋಷಿತವರ್ಗ, ಬಡತನ, ಜೀತದಾಳು, ಅತ್ಯಾಚಾರ.

ಪ್ರಸ್ತುತ ಸಂದರ್ಭದಲ್ಲಿ ಕವಿಯಾಗಿ, ಚಲನಚಿತ್ರ ನಿರ್ದೇಶಕರಾಗಿ, ಗೀತರಚನಾಕಾರಾಗಿ, ಕಥೆಗಾರರಾಗಿ ಪ್ರಸಿದ್ಧಿ ಪಡೆದಿದ್ದರೂ ಭಾರತೀಯ ಸಾಹಿತ್ಯ ಪರಂಪರೆಗೆ ನಾಟಕಕಾರರಾಗಿಯೇ ಚಿರಪರಿಚಿತರಾದವರು ಡಾ. ಚಂದ್ರಶೇಖರ ಕಂಬಾರ. ಇವರು 1981 ರಲ್ಲಿ ರಚಿಸಿರುವ 'ನಾಯೀಕತೆ' ನಾಟಕವೂ ಊಳಿಗಮಾನ್ಯ ಪದ್ಧತಿಯಲ್ಲಿ ಕಂಡು ಬರುವ ಜಮೀನ್ದಾರಿ, ಕೂಲಿಕಾರ ವರ್ಗದ ನಡುವಿನ ಸಂಘರ್ಷವನ್ನು ತರೆದಿಡುತ್ತದೆ. ಈ ಸಂಘರ್ಷವೂ ಕೇವಲ ಹೆಣ್ಣನ್ನು ಪಡೆಯಬೇಕು ಎಂಬ ಹಂಬಲದಿಂದ ಮಾತ್ರ ನಡೆಯದೇ, ಎರಡು ವರ್ಗಗಳ ನಡುವೆ ಆ ಹೆಣ್ಣೆ

ಸಂಘರ್ಷಕ್ಕೆ ಮೂಲ ಪ್ರೇರಣೆಯಾಗುತ್ತಾಳೆ. ಕಂಬಾರರ ಬಹುಪಾಲು ನಾಟಕಗಳು ಜಮೀನ್ದಾರಿ ಪದ್ಧತಿಯ ಕುಮ್ಮಕ್ಕಿನಿಂದ ಬೇಸತ್ತ ಶೋಷಿತ ವರ್ಗ ನಡೆಸುವ ಸಂಘರ್ಷವೇ ವಿಷಯ ವಸ್ತುವಾಗಿದೆ.

ಕಂಬಾರರು ತಮ್ಮ ನಾಟಕಗಳಿಗೆ ಗ್ರಾಮೀಣ ಸಂಸ್ಕೃತಿಯನ್ನು, ಅಲ್ಲಿರುವ ವಿವಿಧ ಮಜಲುಗಳನ್ನು ತೆಗೆದುಕೊಳ್ಳುವುದರಲ್ಲಿ ವಿಶೇಷತೆ ಕಂಡುಬರುತ್ತದೆ. "ಭಾಷೆ ಮತ್ತು ಬಂಧಗಳಲ್ಲಿ ವಿಶಿಷ್ಟರಾಗಿ ಕಾಣಿಸುತ್ತ, ಗ್ರಾಮೀಣ ಸಂಸ್ಕೃತಿಯ ಸ್ಮೃತಿ ಮತ್ತು ಸಂಘರ್ಷದ ಎಳೆಗಳಿಂದ ಕೃತಿ ಕಟ್ಟಿ ಹೊರಡುವ ಕುಶಲತೆ ತೋರಿಸುತ್ತ ಬಂದ ಕಂಬಾರರು ಒಂದು ರೀತಿಯಲ್ಲಿ ಕುತೂಹಲಕರ ಸಾಹಿತ್ಯ ವ್ಯಕ್ತಿ."[1] ಬರಗೂರ ರಾಮಚಂದ್ರಪ್ಪನವರ ಈ ಮಾತು ಕಂಬಾರರ ಸಾಹಿತ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಏಕೆಂದರೆ ಇವರು ತಮ್ಮ ಸಾಹಿತ್ಯದಲ್ಲಿ ಉತ್ತರ ಕರ್ನಾಟಕದ ದೇಶಿ ಸೊಗಡಿನ ನುಡಿಗಳನ್ನು ಬಳಸಿಕೊಂಡು ಯಶಸ್ವಿಯಾದವರು. ಇದರಿಂದ ನಾಯೀಕತೆ ನಾಟಕವೂ ಹೊರತಾಗಿಲ್ಲ. ನಾಟಕವನ್ನು ಪ್ರಾರಂಭಿಸುವುದು ಜಾನಪದ ಶೈಲಿ ಬಯಲಾಟದ ಪರಂಪರೆಯಂತೆ ಕಥೆಗಾರ ಮತ್ತು ಹಿಮ್ಮೇಳದವರ ಸಂಭಾಷಣೆಯಿಂದ. ಇಲ್ಲಿ ಹಣ ಹಾಗೂ ಪ್ರೀತಿಯಲ್ಲಿ ಯಾವುದು ದೊಡ್ಡದು ಎಂಬ ವಿಷಯದ ಕುರಿತ ಚರ್ಚೆ ನಡೆಯುತ್ತದೆ. ಇದು ಮುಂದೆ ಸಂಘರ್ಷಕ್ಕೆ ದಾರಿ ಮಾಡಿಕೊಟ್ಟು ನಾಟಕದ ಅಭಿಲಾಷೆಯನ್ನು ತೆರೆದಿಡುತ್ತದೆ.

ನಾಟಕದ ನಾಯಕನಾಗಿರುವವನು 'ನಾಯೀಮಗ'. ಇವನ ಹೆಸರೇ ಸೂಚಿಸುತ್ತದೆ ಇವನ್ನು ಶೋಷಿತ ವರ್ಗದ ವ್ಯಕ್ತಿ ಎಂದು. ಅವನ ಪರಿಚಯವನ್ನು, ಸದ್ಯದ ಪರಿಸ್ಥಿತಿಯನ್ನು ಕಥೆಗಾರನು ಹೇಳುವಂತೆ "ಬೆನ್ನಾಗ ಬಲ ಇರಲ್ಲಿಲ್ಲ ಸೆಟದೇನಂದರ ಎದಿ ಇರಲ್ಲಿಲ ಯಾವತ್ತೂ ಬಗ್ಗಿಕೊಂಡು ಇರತಿದ್ದ. ಹಿಂಗಾಗಿ ಸಾವ್ಕಾರ ಸೋಮಣ್ಣನ ಪಾದಾ ಕಂಡಿದ್ನ ಹೊರತು ಮೋತೀ ಕಂಡಿರಲಿಲ್ಲ. ಹಡದವರಿರಲಿಲ್ಲ, ಮನೀ ಇಲ್ಲಾ. ಒಂದ ವಿಳಾಸ ಅಂತ ಇರಲಿಲ್ಲಾ, ಅಷ್ಟ ಅಲ್ಲ ಅವಗೊಂದ ಹೆಸರ ಇರಲಿಲ್ಲಾ." ಇಲ್ಲಿ ಕಂಡು ಬರುವುದು ವರ್ಗದ ತಾರತಮ್ಯತೆ. ಅಷ್ಟೇ ಅಲ್ಲದೇ 'ನಾಯೀಮಗಾ' ಎಂಬುವನು ಒಂದು ವ್ಯಕ್ತಿಯಾಗಿ ಕಂಡುಬರದೇ ಒಂದು ವರ್ಗದ ಪ್ರತಿನಿಧಿಯಾಗಿ ನಿಲ್ಲುವಂತವನು. "ನಾಯೀಮಗ ವರ್ಗತಾರತಮ್ಯದ ಕ್ರೂರ ಸಮಾಜದ ದೌರ್ಜನ್ಯಕ್ಕೆ ಒಳಗಾದ ಅಸಹಾಯಕ ವರ್ಗದ ಪ್ರತಿನಿಧಿ ಆಗಿದ್ದಾನೆ."[2] ಕಥೆ ಮುಂದುವರೆದಂತೆ ಶಾರಿಯ ಬಂಡಾಯದ ಮಾತುಗಳಿಂದ ಶ್ರೀಮಂತ ವರ್ಗದ ಎದುರು ಧೈರ್ಯದಿಂದ ಸಿಡಿಗುಂಡಾಗುತ್ತಾನೆ.

ಜೀತದಾಳು ಎಂಬುವವನು ಯಜಮಾನನಿಗೆ ಎಷ್ಟು ನಿಷ್ಠೆಯಿಂದ ಇರುತ್ತಿದ್ದ ಮತ್ತು ಆ ಸ್ಥಿತಿಯನ್ನು ಶ್ರೀಮಂತವರ್ಗ ಹೇಗೆ ವೈಭವಿಸಿ ವಂಚಿಸುತ್ತದೆಯೆಂಬುದಕ್ಕೆ

ಸೋಮಣ್ಣನ ಈ ಮಾತುಗಳೇ ಸಾಕ್ಷಿ. "ಇದು ನನ್ನ ನಾಯಿ ಕಚ್ಚಂದರ ಕಚ್ಚತೈತಿ, ಬೊಗಳಂದರ ಬೊಗಳತೈತಿ, ಅಷ್ಟೇ ಅಲ್ಲ, ಒಮ್ಮೊಮ್ಮಿ ಹಾಡತೈತಿ" ಬಡತನದಲ್ಲಿರುವ ವ್ಯಕ್ತಿಯು ಶ್ರೀಮಂತರ ದರ್ಪಕ್ಕೆ ಅವರ ದೌರ್ಜನ್ಯಕ್ಕೆ ಯಾವುದೇ ಪ್ರತಿಭಟನೆ ನೀಡದೆ ಅವರು ಹೇಳಿದ ಹಾಗೇ ನಡೆದುಕೊಂಡು ಎಲ್ಲಾ ಕಷ್ಟಗಳನ್ನು ಅನುಭವಿಸುತ್ತಾ ಬದುಕನ್ನು ಕಳೆಯುತ್ತಿದ್ದರು. ಇಲ್ಲಿ 'ನಾಯೀಮಗ'ನ ಪಾತ್ರದ ಅಸಹಾಯಕತೆ ಮತ್ತು ಊರಿನ ಗೌಡನಿಂದ ಸಮಾಜಕ್ಕಾಗುವ ದೌರ್ಜನವು ಪ್ರದರ್ಶನಗೊಳ್ಳುತ್ತದೆ.

ಶ್ರೀಮಂತ ಸೋಮಣ್ಣನ ದೌರ್ಜನ್ಯವು ಊರಿನಲ್ಲಿರುವ ಮಹಿಳೆಯರ ಮೇಲು ನಡೆಯುತ್ತಿತ್ತು ಎಂಬುದು ಅವನ ತಾಯಿಯ ಮಾತಿನಿಂದ ತಿಳಿಯಬಹುದು. "ಇನ್ನೊಬ್ಬರ ಜೀವದ ಜೊತೆ ಆಟ ಆಡಬಾರದೋ ಮಗನ ಬಡವರ ಇರಲಿ, ಅವರಿಗೂ ಜೀವಾ ಇರತೈತಿ ಮಾಡೋ ಕಾರಬಾರ ಮಾಡಿದಿ ಚೆಲಿವಿ ಸತ್ತಹೋದ್ಲು." ಆಳುವವರ್ಗ ಮಾತ್ರ ಬದುಕಲು, ಸ್ವಾತಂತ್ರ್ಯದಿಂದ ಬಾಳಲು ಅರ್ಹರಲ್ಲ, ಬಡವರು ಸಹಿತ ಬದುಕಲು ಬಯಸುವವರೇ. ಅವರನ್ನು ಅವರ ಪಾಡಿಗೆ ಬಾಳಲು ಬಿಡು. ಒಂದು ವೇಳೆ ಅವರು ಎದುರಾಗಿ ತಿರುಗಿ ನಿಂತರೇ ನೀ ಜೀವಿಸುವುದು ಕಷ್ಟವಾಗುತ್ತೆ ಎಂಬ ಎಚ್ಚರಿಕೆಯ ನುಡಿಯು ತಾಯಿಯ ಮುಖೇನ ವ್ಯಕ್ತವಾಗುತ್ತದೆ. ಊರಿನಲ್ಲಿರುವ ಪ್ರತಿಯೊಂದು ಹೆಣ್ಣಿನ ಮೇಲೆ ದೌರ್ಜನ್ಯ ಮಾಡುವ ಸೋಮಣ್ಣನು ಚೆಲಿವಿ ಎಂಬುವಳನ್ನು ಅತ್ಯಾಚಾರ ಮಾಡಿ ಸಾಯಿಸಿರುವುದು ಸಹಿತ ಮುಂದೆ ಅವನ ಮನೆಯ ಭಾಗ್ಯಲಕ್ಷ್ಮೀಯು ಮತ್ತು ಅವನ ಹೆಂಡತಿಯಾದ ಲಕ್ಷ್ಮೀಯು ಆಳುಮಗ ಚೆಲವಿಯ ಗಂಡನೊಂದಿಗೆ ಮನೆ ಬಿಟ್ಟು ಹೋಗಲು ದಾರಿ ಮಾಡಿಕೊಡುತ್ತದೆ.

ಸೋಮಣ್ಣ ನೀಡಿದ ಹಣದ ಆಸೆಗೆ ದಾಸ ಮತ್ತು ಅವನ ಹೆಂಡತಿ ಸಾವಂತ್ರಿಯು ಮಾರುಹೋಗಿ ತಮ್ಮ ತಂಡವನ್ನು ಕರೆದುಕೊಂಡು ಸೋಮಣ್ಣನ ಶಿವಾಪುರಕ್ಕೆ ಬಂದ ನಂತರ ಅಲ್ಲಿ ಶಾರಿ ಮತ್ತು ಸೋಮಣ್ಣನ ನಡುವೇ ನಡೆಯುವ ಸಂಭಾಷಣೆಯು ನಾಟಕಕ್ಕೆ ಮತ್ತೊಂದು ತಿರುವು ನೀಡುತ್ತದೆ. ಇಲ್ಲಿಂದ ಎರಡು ವರ್ಗಗಳ ನಡುವಿನ ಅಂತರ ಕಡಿಮೆ ಮಾಡಲು ಸಂಘರ್ಷಕ್ಕೆ ಮೊದಲು ಮಾಡುವಳು ಶಾರಿ. "ನೀವೇನೋ ದೊಡ್ಡ ಶ್ರೀಮಂತರು ಜಗತ್ತಿನಾಗ ಇದ್ದವರನೆಲ್ಲಾ ನಿಮ್ಮ ನೊಗಕ್ಕೆ ಹೂಡಬಲ್ಲಿರಿ. ಆದರೆ ನಾ ನಿಮ್ಮ ದನಾ ಆಗಾಕ ತಯಾರಿಲ್ಲ." ಎಂದು ಸೋಮಣ್ಣನ ಮುಖಕ್ಕೆ ಹೊಡೆದಂತೆ ಮಾತನಾಡುತ್ತಾಳೆ. ಅಂದರೆ ದುಡ್ಡಿನಿಂದ ಏನನ್ನಾದರೂ ಕೊಂಡುಕೊಳ್ಳಬಹುದು, ಯಾರನಾದರೂ ಮರುಳು ಮಾಡಬಹುದು ಎಂಬುದನ್ನು ಪ್ರತಿಭಟನೆಸುವಂತೆ ಶಾರಿಯು 'ನಾ ನಿಮ್ಮ ದನಾ ಆಗಾಕ ತಯಾರಿಲ್ಲ' ಎಂದು ನುಡಿವಳು. ಈ ನುಡಿಯು ನಾಟಕದ ಸಂಘರ್ಷದ ಮೊದಲ ಅಡಿಪಾಯವಾಗುತ್ತದೆ.

ಬಡವರ ಅಸಹಾಯಕತೆಯನ್ನು ಬಳಸಿಕೊಂಡು ಶ್ರೀಮಂತವರ್ಗದವರು

ಕರುಣೆ ಇಲ್ಲದೆ ಸೊಕ್ಕಿನಿಂದ ನಡೆದುಕೊಳ್ಳಲು, ದೌರ್ಜನ ನಡೆಸಲು ಕಾರಣ ಏನೆಂಬುದನ್ನು ಶಾರಿಯು "ಅವ ಹಸಿವಿನಿಂದ ನಿಮ್ಮ ನಾಯಿ ಆಗ್ಯಾನ. ನಾವೂ ಅದಿವಿ, ನಿಮ್ಮಂಥವರ ಕೈಯಿಂದ ಮಂತ್ರ ಹಾಕಿಸಿಕೊಳ್ಳುವವರು ನಾವು ಮನುಷ್ಯರು. ನೀವಲ್ಲರಿ" ಎಂದು ವ್ಯಕ್ತಪಡಿಸುತ್ತಾಳೆ. ಜಮೀನ್ದಾರಿಗಳು ದುಡಿಯುವ ವರ್ಗದ ಮೇಲೆ ಮಾಡುವ ದೌರ್ಜನಕ್ಕೆ ಕಾರಣಗಳು ಹಸಿವು, ಬಡತನ, ಯಜಮಾನನಿಗೆ ನಿಷ್ಠೆಯಿಂದ ಇರುವುದೆ ಆಗಿವೆ. "ನಾಟಕದಲ್ಲಿ ದುಡಿಯುವ ಜನರ ಪ್ರತಿನಿಧಿಯಾಗುವ 'ನಾಯೀಮಗ' ಮತ್ತು ವಂಚನೆಯ ವೃತ್ತದಲ್ಲಿ ಸಿಕ್ಕಿ ಸಿಡಿಯುವ ಹೆಣ್ಣಾಗಿ 'ಶಾರಿ' ಬರುವುದುರಿಂದ ನಾಟಕಕ್ಕೆ ಸಾಂಪ್ರದಾಯಿಕ ಸಂಸ್ಕೃತಿಯ ಸೂಕ್ಷ್ಮಗಳ ಅರಿವು ಒದಗಿ ಬಂದಿವೆ."[3] ಶಾರಿ ಮತ್ತು ನಾಯಿಮಗ ಕೆಳವರ್ಗದ ಸಂಸ್ಕೃತಿಯ ಸ್ಫೂರ್ತಿಯ ಚಿಲುಮೆಗಳಾಗಿ ಕಂಡು ಬರುವುದು, ಗೌಡನ ವಿರುದ್ಧ ಪ್ರತಿಭಟನೆ ಮಾಡುವುದು, ಕೆಳವರ್ಗವು ಮೇಲವರ್ಗದ ವಿರುದ್ಧ ಸಂಘಟನೆಗೊಳ್ಳುವುದರ ಸಂಕೇತವಾಗಿದೆ.

'ಅವನ ಹಾಡ ಕೇಳತಿದ್ದರ ಯಾರೋ ಶಾಪದಾಗಿರೋ ದೇವರು ನನ್ನ ಶಾಪಾ ಹರೀರೋ ಅಂತ ಅತ್ಹಾಂಗಿತ್ತು.' ಶಾರಿಯ ಈ ಮಾತು ಕೆಳವರ್ಗದ ಅಸಹಾಯಕತೆಯನ್ನು ತಿಳಿಸುತ್ತದೆ. ಶಾಪ ಎಂಬುದು ಅಸಹಾಯಕತೆಯ ಸಂಕೇತವಾಗಿದೆ. ಶತಶತಮಾನಗಳಿಂದ ಮೇಲ್ವರ್ಗದವರ ಹಿಡಿತದಲ್ಲಿರುವ ಶೋಷಿತ ವರ್ಗ ತನ್ನನ್ನು ಬಿಡುಗಡೆಗೊಳಿಸುವ ಸಂದರ್ಭ ಯಾವಾಗ ಬರುವುದು ಎಂದು ಎದುರು ನೋಡುವಂತಿದೆ. ಶಾರಿಯು ನಾಯಿಮಗನಿಗೆ ಪ್ರತಿಭಟನೆ ಅಥವಾ ಸಂಘರ್ಷಕ್ಕೆ ಪ್ರೇರಕ ಶಕ್ತಿಯಾಗಿ, ಸ್ಫೂರ್ತಿಯ ಚಿಲುಮೆಯಾಗಿ, ಅವನ ಬದುಕಿನ ದಾರಿಯ ಗತಿಯನ್ನೇ ಬದಲಾಯಿಸುವ ಶಿಲ್ಪಿಯಾಗಿ ಕಂಡುಬರುತ್ತಾಳೆ. ಕಂಬಾರರು ಇಲ್ಲಿ 'ಶಾರಿ' ಮುಖೇನ ಶೋಷಿತ ವರ್ಗದಲ್ಲಿ ಆಶಾಕಿರಣವನ್ನು ಮೂಡಿಸಿದ್ದಾರೆ. ಇವರ ಎಲ್ಲಾ ನಾಟಕಗಳಲ್ಲಿ ಶೋಷಿತ ವರ್ಗದ ಉದ್ಧಾರಕ್ಕಾಗಿ ಇವರಲ್ಲಿಯೇ ಯಾರೋ ಒಬ್ಬನು ಶಿಕ್ಷಣ ಪಡೆದು, ಇಲ್ಲಿಯ ವ್ಯವಸ್ಥೆಯ ವಿರುದ್ಧ ಸೆಟೆದು ನಿಲ್ಲುತ್ತಾರೆ. ಆದರೆ ಇವನಿಂದ ಯಶಸ್ಸು ದೊರೆಯುತ್ತದೆ ಎನ್ನುವ ವೇಳೆಗೆ ಅವನನ್ನು ಕೊಲೆ ಮಾಡಲಾಗುತ್ತದೆ. ಇಲ್ಲವೇ ಅವನು ಆ ವ್ಯವಸ್ಥೆಯಲ್ಲಿ ಒಬ್ಬನಾಗಿ ಬಿಡುತ್ತಾನೆ. ಈ ನಾಟಕದ ಅಂತ್ಯದಲ್ಲಿ ಯಾವುದೇ ಕೊಲೆಗಳು ನಡೆಯುವುದಿಲ್ಲ. ಇಲ್ಲಿ ಆಳುವ ವರ್ಗದಿಂದ ಶೋಷಿತ ವರ್ಗಕ್ಕೆ ಮುಕ್ತಿ ದೊರೆಯುವುದಿಲ್ಲ ಎಂಬ ಮಾತು ನಿಜ.

ಮೊದಲಾರ್ಧದಲ್ಲಿ ನಾಯಿಮಗನಿಗೆ ಹೆಚ್ಚಿನ ಮಾತುಗಳಿಲ್ಲ ಆದರೆ ಉತ್ತರಾರ್ಧದಲ್ಲಿ ಬದಲಾವಣೆಗೆ ಇವನ್ನೇ ಅಸ್ತ್ರವಾಗಿ ಕಂಡು ಬರುವುದು ಶಾರಿಯ ಸ್ಫೂರ್ತಿಯಿಂದ. 'ನನಗೆ ಬ್ಯಾಡ, ಕೂತಾನಲ್ಲ, ಅವನಿಗೇ ಇನ್ನಷ್ಟು ಹಾಕು. ಯಾಕಂದರ ಪಾಪ, ಹೊಟ್ಟೀ ಸಲುವಾಗಿ ನಾಯಿ ಆಗ್ಯಾನ ನೋಡು' ಈ ವೇಳೆಗಾಗಲೇ ಶಾರಿಯು ನಾಯಿಮಗನಲ್ಲಿ ಪ್ರತಿಭಟನೆಯ ಅಂಕುರ ಮೂಡಿಸಲು ಪ್ರಾರಂಭಿಸುತ್ತಾಳೆ. ಅವಳು

ಊಟ ಬಿಟ್ಟಿದಕ್ಕೆ ಅವನು ಊಟ ಬೀಡುವುದು ಇದು ಶಾರಿ ಮತ್ತು ನಾಯಿಮಗನ ನಡುವೇ ಪ್ರೀತಿ ಹುಟ್ಟುವ ಸುಸಮಯ. ಜೊತೆ ಜೊತೆಯಲ್ಲೇ ಸೋಮಣ್ಣನ ವಿರುದ್ಧ ನಾಯಿಮಗನಲ್ಲಿ ಸಂಘರ್ಷಕ್ಕೆ ಪೂರಕ ಬುನಾದಿ ಹಾಕುವಳು.

ಶಾರಿಯ ಸಹವಾಸದಿಂದ ನಾಯಿಮಗ ಹೋಗಿ ಸಿದ್ಧರಾಮನಾದದು ಬದಲಾವಣೆಯ ಸಂಕೇತ. ಅವಳಿಂದ ತನ್ನ ಇಡೀ ಪರಿವಾರ(ಶೋಷಿತವರ್ಗ)ವು ಬಿಡುಗಡೆ ಹೊಂದುವುದು ಎಂದು ನಂಬುವನು. ಇದೆ ಭರವಸೆಯಿಂದ ಶಾರಿಯ ಹತ್ತಿರ ತಮ್ಮ ಪರಿವಾರ ಬರುತ್ತಿರುವಂತೆ, ನಾಯಿಮಗ ಭ್ರಮಾಲೋಕದಲ್ಲಿ ನಡೆದಾಡುತ್ತಿರುವಂತೆ, ಶಾರಿ ಮತ್ತು ನಾಯಿಮಗ (ಸಿದ್ಧರಾಮ)ರ ಸಂಭಾಷಣೆಯಿಂದ ಅರಿಯಬಹುದು.

“ನಾ – ಸಂಗೀತಾ ಮಂದಿ ನನ್ನ ಜೋಡಿ ಬರಾಕ ಹತ್ಯಾರ !

ಶಾ – ಹೌಂದ ? ಯರ್ಯಾರ ? ಗುರುತ ಹಿಡಿ.

ನಾ – ಎಲ್ಲಾರು ಹರಕ ಅಂಗಿ ಹಾಕ್ಯಾರ. ಹಸದ್ದಾರ ಆದರ ಎಲ್ಲಾರು ನಗಾಕ ಹತ್ಯಾರ.

ಶಾ – ಯಾಕಂತ ?

ನಾ – ಹಾಡಾಕ ಹತ್ಯಾರ.

ಶಾ – ಏನಂತ

ನಾ – ನಾವು ನಾಯಿಗಳಲ್ರೆಪೋ ಅಂತ

ಶಾ – ಎಲ್ಲಾರು ಕೂಡಿ ಹಾಡಕೋತ ಎಲ್ಲಿಗೆ ಹೊಂಟೇರಿ ?

ನಾ – ನಿನ್ನ ಹಂತ್ಯಾಕ”

ಶಾರಿಯ ಬಳಿಗೆ ಬರುವುದು ಎಂದರೆ ಸೋಮಣ್ಣನ ವಿರುದ್ಧ ಸಿಡಿದೇಳಲು ನಾಂದಿ ಹಾಡಿದಂತೆ. ಶಾರಿಯೇ ತಮಗೆ ಸ್ಪೂರ್ತಿ, ಅವಳೊಂದಿಗೆ ನಾವು ಗೌಡನ ದೌರ್ಜನವನ್ನು ಹಿಮ್ಮೆಟಿಸಲು ಸಿದ್ಧರಿದೇವೆ ಎಂದು ಸಾರಿದ ಹಾಗೆ. ಈ ಸಂದರ್ಭಕ್ಕೆ ಕಂಬಾರರು ಬಳಸಿರುವ ಉತ್ತರ ಕರ್ನಾಟಕ ಭಾಷೆಯು ನೈಜ ಪರಿಸ್ಥಿತಿಯ ದ್ಯೂತಕವಾಗಿದೆ. ಸೋಮಣ್ಣ ಎಂಬ ಆಳುವವರ್ಗದ ಪ್ರತಿನಿಧಿಯ ವಿರುದ್ಧ ಸಿದ್ಧರಾಮ ಉರ್ಫ್ ನಾಯಿಮಗ ಶೋಷಿತವರ್ಗದ ಪ್ರತಿನಿಧಿಯಾಗಿ ಎದುರುಗೊಳ್ಳುವ ಸನ್ನಿವೇಶವು ಎರಡು ಸಂಸ್ಕೃತಿಗಳ ಮುಖಾಮುಖಿಯ ಚಿತ್ರಣವಾಗಿದೆ.

‘ಏಏಏ........ ಯಾರಾದರೂ ಆ ದೊಡ್ಡ ನಾಯೀ ನೋಡೀರೇನ್ರೆಪೊ?

ಕರಗೈತಿ, ಎತ್ತರೈತಿ ನೆತ್ತಾಗೆಯಗ ಕಣ್ಣದಾವ ಮಾತಿಗೊಮ್ಮಿ ಏ ನಾಯೀಮಗನ ಅಂತಿರತೈತ್ತಿ. ಸಿಕ್ಕರ ನನಗಷ್ಟು ಲಗೂನ ಹೇಳಿಕಳಸರಿ. ನನ್ನ ವಿಳಾಸ ಸಿದ್ದರಾಮ ಉರ್ಫ್ ನಾಯೀಮಗ. ಮುಕ್ಕಾಂ ಪೋಸ್ಟ್ ಶಿವಾಪುರ ಜಿಲ್ಲಾ ಬೆಳಗಾವಿ' ಇಲ್ಲಿ ದೊಡ್ಡ ನಾಯಿ ಎಂದು ಬಳಸಿರುವುದು ಸೋಮಣ್ಣನನ್ನು ಸಂಬೋಧಿಸುತ್ತದೆ. ನೆತ್ತ್ಯಾಗ ಕಣ್ಣಿದಾವ ಅಂದಿದು ಅವನ ದರ್ಪದ ಸಂಕೇತವಾಗಿ. ತನ್ನ ನಾಯೀಮಗ, ನಾಯೀಮಗ ಎಂದು ಕರೆಯುವ ಅವನಿಗೂ ನಾಯಿ ಎಂದು ಹೇಳಿರುವುದು, ನಾಯೀಮಗನಿಗೆ ತನ್ನ ಮೇಲೆ ಆಗುವ ದೌರ್ಜನ್ಯದ ಅಂದಾಜು ಮಾಹಿತಿ ದೊರೆತಿದು ಶಾರಿಯ ಮೇಲಿನ ಪ್ರೀತಿಯ ಮುಖಾಂತರ. ಇಲ್ಲವೆಂದರೆ ಶತಮಾನಗಳು ಉರುಳಿದರು ನಾಯೀಮಗನಾಗೇ ಉಳಿಯುತ್ತಿದ್ದ. ಎಂದಿಗೂ ಸಿದ್ಧರಾಮನಾಗಿ ಬದಲಾವಣೆ ಹೊಂದುತ್ತಿರಲಿಲ್ಲ. ಈಗ ಅವನ ಮಾತಿನಲ್ಲಿ ಸ್ವತಂತ್ರ್ಯದ ಗಟ್ಟಿತನವಿದೆ, ಎದುರಿಸುವ ಧೈರ್ಯ ತುಂಬಿದೆ. ಅದರಂತೆಯೇ "ನಾಯೀಮಗ ಮತ್ತು ಶಾರಿಯು ಸೇರಿ ಪ್ರತಿಭಟಿಸುವ ಹಂತ ತಲುಪುವುದರಿಂದ ಸಾಂಪ್ರದಾಯಿಕ ಸಂಸ್ಕೃತಿಯನ್ನು ಸೀಳಿ ಹೊರಡುವ ಶಕ್ತಿಗಳಾಗಿ ನಮಗೆ ಮುಖ್ಯರಾಗುತ್ತಾರೆ."[4] ಎಂದು ಬರಗೂರು ರಾಮಚಂದ್ರಪ್ಪನವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶೋಷಿತ ವರ್ಗದ ಜನರು ಮನುಷ್ಯರು ಎಂಬುದನ್ನು ಮರೆತು ಅವರನ್ನು ಪ್ರಾಣಿಗಿಂತ ಕಡೆಯಾಗಿ ನೋಡುವ ಸಿರಿವಂತ ವರ್ಗ. ಇಲ್ಲಿ ಶೋಷಿತವರ್ಗವು ಒಂದು ವೇಳೆ ತನ್ನ ಮೇಲಾಗುವ ದೌರ್ಜನ್ಯ, ದಾಸ್ಯತ್ವವನ್ನು ನಿರಾಕರಿಸಿದಾಗ ಆಗುವ ಬದಲಾವಣೆ, ಕ್ರೂರತೆಯನ್ನು ಚಿತ್ರಿಸುತ್ತದೆ.

ಶಾರಿಯು ಸಿದ್ಧರಾಮ(ನಾಯೀಮಗ)ನನ್ನು ಕರೆದುಕೊಂಡು ಮಠಕ್ಕೆ ಬಂದು ನಾಯೀಮಗನನ್ನೇ ನಾನು ಮದುವೆಯಾಗುತ್ತೀನಿ ಆಶೀರ್ವಾದ ಮಾಡು ಎಂದು ಸೋಮಣ್ಣನನ್ನು ಕೇಳಿದಾಗ. ಅವನು ಒಪ್ಪದೇ ಅವಳ ಮೇಲೆ ಏರಿ ಹೋಗುತ್ತಾನೆ. ಇದು ಸಂಘರ್ಷದ ಕೊನೆಯ ಘಟ್ಟ ಶಾರಿಯು 'ಏನೋ ಸಾವ್ಕರ್‌ರು, ಮದುವ್ಯಾಗಲಿ ಅಂತ ದೊಡ್ಡ ಮನಸ್ಸ ಮಾಡಿ ಹೇಳಿಕಳಿಸಿದಿರಂತ. ಅದಕ್ಕ ನಾನೂ ತಯಾರಾಗಿ ನನ್ನ ಗಂಡನ್ನ ನಾನ ಆರಿಸಿಕೊಂಡಬಿಟ್ಟೆ. ಇವನ ನನ್ನ ಗಂಡ ಸಿದ್ಧೂ, ಸಾವ್ಕರ್‌ರಿಗಿ ನಮಸ್ಕಾರ ಮಾಡು.' ಈ ಮಾತಿನಿಂದ ಸೋಮಣ್ಣ ಮತ್ತು ಸಿದ್ಧರಾಮ(ನಾಯಿಮಗ) ನಿಗೂ ಆಘಾತವಾಗುತ್ತದೆ. ನಾಯೀಮಗನಿಗೂ ಶಾರಿಯು ತನ್ನನ್ನು ಮದುವೆಯಾಗುವಳು ಎಂಬ ಯಾವ ಕಲ್ಪನೆಯು ಇರುವುದಿಲ್ಲ. ಸೋಮಣ್ಣನ ಮೇಲಿನ ಭಯ, ಗೌರವದಿಂದ ನಾಯೀಮಗ ಯಾವುದೇ ಪ್ರತಿಕ್ರಿಯೆ ತೋರದಿದ್ದಾಗ "ಥೂ ಹಲ್ಕಟ್ಟ ನಾಲಾಯಖ, ನಾ ನಿನ್ನ ಹೇಂತಿ ಅಂತ ಹೇಳಲಿಲ್ಲಾ? ನಿನ್ನ ಹೇಂತಿಮಾನ ನಿನ್ನ ಎದುರಿಗೇ ತಗೀತೇನಂತಾನ, ನಿನಗ ಒಂದೀತಾದರೂ ಅಭಿಮಾನ ಇಲ್ಲಾ? ನೀನೊಬ್ಬ ಗಂಡಸು ಅಂತ ತಿಳಿದಿದ್ದೆ, ಯಾವುದೋ ಶಾಪ ಹೊಂದಿದ

ದೇವರೂ ಅಂತ ಅಂದ್ಕೊಂಡಿದ್ದೆ. ನನ್ನ ನಂಬಿಕೆ ಹುಸಿ ಮಾಡಿದೆಲ್ಲೊ! ಬರೋವಾಗ ಏನ ಹೇಳಿದ್ದೀ? ನನ್ನ ರಕ್ಷಣಾ ಮಾಡ್ತೀನಂತ ಹೇಳಿರತಲಿಲ್ಲಾ? ಇಷ್ಟು ಲಗು ಮರತಿ?'' ಈ ರೀತಿಯಾಗಿ ಶಾರಿಯು ನಾಯೀಮಗನಲ್ಲಿರುವ ಕೋಪವನ್ನು ಅವಳ ಮೇಲಿನ ಪ್ರೀತಿಯಿಂದ ಸಂಘರ್ಷ ಮಾಡಲು ಪ್ರೇರೆಪಿಸುತ್ತಾಳೆ.

ಕೊನೆಗೆ ನಾಯೀಮಗನು ಶಾರಿಯನ್ನು ತನ್ನ ಹೆಂಡತಿ ಅವಳ ಮೇಲೆ ಕೈ ಹಾಕಿದರೆ ಸರಿಯಿರಲ್ಲ. ಇಲ್ಲಿಂದ ಹೊರಟು ಹೋಗು ಎಂದು ತನ್ನ ಯಜಮಾನ ಸೋಮಣ್ಣನಿಗೆ ಎಚ್ಚರಿಕೆ ನೀಡುತ್ತಾನೆ. ಸೋಮಣ್ಣ ಆಘಾತಕ್ಕೆ ಒಳಗಾಗಿ ಅವನನ್ನು ಎದುರಿಸಲಾಗದೆ. ಅಲ್ಲಿಂದ ಹೊರಟು ಹೋಗಿ ಕುಸ್ತಿಪಟ್ಟುಗಳನ್ನು ಕರೆತರಲು ಹೋಗುವನು. ಗೌಡನಿಗೆ ಎರಡು ಆಘಾತಗಳು ಏಕಕಾಲಕ್ಕೆ ಬಂದು ಒದಗುತ್ತವೆ. ಒಂದು ಶಾರಿಯನ್ನು ನಾಯೀಮಗ ಸಿದ್ಧರಾಮನಾಗಿ ಓಡಿಸಿಕೊಂಡು ಹೋದರೆ, ಇನ್ನೊಂದು ಹೆಂಡತಿ ಲಕ್ಷ್ಮೀಯನ್ನು ಗೌಡನಿಂದ ಅತ್ಯಾಚಾರಕ್ಕೆ ಒಳಗಾಗಿ ಅಸುನೀಗಿದ ಚೆಲಿವಿ ಗಂಡ ಮಾರುತಿ ಓಡಿಸಿಕೊಂಡು ಹೋಗುವನು. ಕಂಬಾರರು ''ನವ್ಯ ಸಾಹಿತ್ಯ ಒಗ್ಗಿಸಿಕೊಂಡ ನಯ ನಾಜೂಕಿನ ಮಧ್ಯಮವರ್ಗದ ಸಂಸ್ಕೃತಿಯ ಸೆಳೆತ ಅವರ ನಾಟಕಗಳ ವಸ್ತುವಿನಲ್ಲಿದ್ದರೆ ಲಯ ಮತ್ತಿತರ ಮಜಲುಗಳಲ್ಲಿ ಕಾಣುವ ಮಣ್ಣಿನ ಮಿಡಿತಗಳ ದ್ವಂದ್ವ ಅವರ ಭಾಷಾ ಪ್ರಯೋಗದಲ್ಲಿ ಇರುತ್ತದೆ.''[5] ಕಥೆಯ ಹಂದರವು ಸರಳವಾಗಿ ಕಂಡರು ಅದನ್ನು ಕಟ್ಟಿಕೊಡುವಲ್ಲಿ ಕಂಬಾರರು ಬಳಸುವ ಭಾಷೆಯು ಅದಕ್ಕೊಂದು ಮೆರಗನ್ನು ತಂದುಕೊಡುತ್ತದೆ.

ನಾಯೀಮಗನಾಗಿದ್ದವನ್ನು ಶಾರಿಯ ಪ್ರೀತಿಯಿಂದ ಸಿದ್ಧರಾಮನಾದದ್ದು, ಸೋಮಣ್ಣನ್ನು ಬೇರೆ ಹೆಣ್ಣಿನ ಆಸೆಯಿಂದ ಮನೆಯ ಭಾಗ್ಯಲಕ್ಷ್ಮಿಯಾದ ಹೆಂಡತಿ ಲಕ್ಷ್ಮೀಯನ್ನು ಕಳೆದುಕೊಂಡದು, ಜಮೀನ್ದಾರರು ಕೆಳವರ್ಗದ ಹೆಣ್ಣಿನ ಮೋಹಕ್ಕೆ ಸಿಕ್ಕಿ ಅವನ ಹೆಂಡತಿಯು ಕೆಳವರ್ಗದವನೊಂದಿಗೆ ಕೂಡಿಕೊಳ್ಳುವುದು, ಇಲ್ಲವೇ ಅವನೊಂದಿಗೆ ಓಡಿಹೋಗುವುದು ಕಂಬಾರರ ನಾಟಕಗಳಲ್ಲಿ ಸಾಮಾನ್ಯ ಚಿತ್ರಣವಾಗಿ ಕಂಡು ಬರುತ್ತದೆ. ಶಾರಿಯಿಂದ ಸಂಘರ್ಷ ಪ್ರಾರಂಭವಾಗಿ ಅಂತ್ಯವೂ ಸಹ ಶಾರಿಯು ಓಡಿ ಹೋಗುವುದರ ಮೂಲಕ ಮುಕ್ತಾಯವಾಗುತ್ತದೆ.

**ಅಡಿ ಟಿಪ್ಪಣಿಗಳು:**

1. ಚಂದ್ರಶೇಖರ ಕಂಬಾರ, (2011), ನಾಯೀಕತೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ಪು.ಸಂ. ಮುನ್ನುಡಿ
2. ಜ್ಯೋತಿ ಕೆ.ಎಸ್., (2015), ಗಿರೀಶ ಕಾರ್ನಾಡ ಮತ್ತು ಚಂದ್ರಶೇಖರ ಕಂಬಾರರ ನಾಟಕಗಳ ತೌಲನಿಕ ಅಧ್ಯಯನ (ಸಂಶೋಧನ ಮಹಾಪ್ರಂಬಂಧ), ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.ಸಂ. 97
3. ಚಂದ್ರಶೇಖರ ಕಂಬಾರ, (2011), ನಾಯೀಕತೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ಪು.ಸಂ.ಮುನ್ನುಡಿ.
4. ಚಂದ್ರಶೇಖರ ಕಂಬಾರ, (2011), ನಾಯೀಕತೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ಪು.ಸಂ. ಮುನ್ನುಡಿ.
5. ಚಂದ್ರಶೇಖರ ಕಂಬಾರ, (2011), ನಾಯೀಕತೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ಪು.ಸಂ. ಮುನ್ನುಡಿ.

**ಪರಾಮರ್ಶನ ಗ್ರಂಥಗಳು:**


1. ಚಂದ್ರಶೇಖರ ಕಂಬಾರ, (2011), ನಾಯೀಕತೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
2. ಜ್ಯೋತಿ ಕೆ.ಎಸ್., (2015), ಗಿರೀಶ ಕಾರ್ನಾಡ ಮತ್ತು ಚಂದ್ರಶೇಖರ ಕಂಬಾರರ ನಾಟಕಗಳ ತೌಲನಿಕ ಅಧ್ಯಯನ (ಸಂಶೋಧನ ಮಹಾಪ್ರಂಬಂಧ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.